# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಟಿ. ಎ. ಶರವಣ್ಣ ರವರ 330 ನೇ ನಿಯಮದ ಅಡಿಯಲ್ಲಿ ಕೇಳಿರುವ ಪ್ರಶ್ನೆಗೆ (ಸೂಚನೆ ಸಂಖ್ಯೆ 106 ಕ್ಕೆ) ಉತ್ತರ**

**ಪ್ರಶ್ನೆ:**

ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಬಾಕಿ ಬಿಲ್ಲುಗಳನ್ನು ಪಾವತಿ ಮಾಡುವಾಗ ಜೇಷ್ಠತೆ ಆಧಾರದ ಮೇಲೆ ಹಾಗೂ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಹಣವನ್ನು ಬಿಡುಗಡೆ ಮಾಡದೆ ಮಧ್ಯವರ್ತಿಗಳ ಪ್ರಭಾವದಿಂದ ತಮಗೆ ಬೇಕಾದ ವ್ಯಕ್ತಿಗಳಿಗೆ ಬಾಕಿ ಬಿಲ್ಲುಗಳನ್ನು ಪಾವತಿ ಮಾಡಲಾಗುತ್ತಿದೆ ಎಂದು ಗುತ್ತಿಗೆದಾರರ ಸಂಘವು ಅನೇಕ ಬಾರಿ ರಾಜ್ಯ ಸರ್ಕಾರದ ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಮಾನ್ಯ ಸಚಿವರಿಗೆ ಮನವಿ ಮಾಡಿದ್ದರೂ ಸಹ ಇಲಾಖೆಯಲ್ಲಿ ಮಧ್ಯವರ್ತಿಗಳು ಹಾವಳಿ ಕಡಿಮೆಯಾಗದೆ ಮಾನ್ಯ ಮುಖ್ಯಮಂತ್ರಿಯವರ ಅಧೀನದಲ್ಲಿ ಬರುವ ಆರ್ಥಿಕ ಇಲಾಖೆಯೇ ರಾಮನಗರ ಮತ್ತು ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಹಣ ಪಾವತಿಸಲು ಸೂಚಿಸಿದರೂ ಕೂಡ ಸದರಿ ಇಲಾಖೆಯ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಬಿಲ್ಲುಗಳನ್ನು ಪಾವತಿಸಲು ಹಣ ಬಿಡುಗಡೆ ಮಾಡದಂತೆ ತಡೆಹಿಡಿದಿರುವ ಬಗ್ಗೆ ಮಾನ್ಯ ಸಣ್ಣ ನೀರಾವರಿ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:**

ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2025-26 ನೇ ಸಾಲಿನಲ್ಲಿ ಒದಗಿಸಿರುವ ಅನುದಾನ ಹಾಗೂ ನವೆಂಬರ್ 2025 ಅಂತ್ಯಕ್ಕೆ ಬಾಕಿ ಬಿಲ್ಲುಗಳ ವಿವರಗಳನ್ನು, ಅನುಬಂಧದಲ್ಲಿ ನೀಡಲಾಗಿದೆ.

ಇಲಾಖೆಗೆ ಒದಗಿಸಿರುವ ಅನುದಾನ, ಹಾಲಿ ಪೂರ್ಣಗೊಂಡಿರುವ / ಪ್ರಗತಿಯಲ್ಲಿರುವ ಕಾಮಗಾರಿಗಳು ಹಾಗೂ ಬಾಕಿ ಬಿಲ್ಲುಗಳನ್ನು ಗಣನೆಗೆ ತೆಗೆದುಕೊಂಡು ನಿಯಮಾನುಸಾರ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ.

ಆರ್ಥಿಕ ಇಲಾಖೆಯ ಹಿಂಬರಹದಲ್ಲಿ ರಾಮನಗರ ಮತ್ತು ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ 2025-26 ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಬಾಕಿ ಬಿಲ್ಲುಗಳನ್ನು ಪಾವತಿಸಲು ಪರಿಶೀಲಿಸಿ ಕ್ರಮ ವಹಿಸುವಂತೆ ತಿಳಿಸಿರುತ್ತಾರೆ.

ಇಲಾಖೆಗೆ ಒದಗಿಸಿರುವ ಅನುದಾನ, ಹಾಲಿ ಪೂರ್ಣಗೊಂಡಿರುವ / ಪ್ರಗತಿಯಲ್ಲಿರುವ ಕಾಮಗಾರಿಗಳು ಹಾಗೂ ಬಾಕಿ ಬಿಲ್ಲುಗಳನ್ನು ಗಣನೆಗೆ ತೆಗೆದುಕೊಂಡು ನಿಯಮಾನುಸಾರ ಗುತ್ತಿಗೆದಾರರಿಗೆ ಹಣ ಪಾವತಿಸಲು ಕ್ರಮ ಕೈಗೊಳಳಾಗುವುದು.

**MID/144/LCQ/2025**

(ಎನ್.ಎಸ್. ಭೋಸರಾಜು)
ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಟಿ .ಎ ಶರವಣ್ಣ ರವರ ನಿಯಮ 330 ರಡಿ ಕೋರಿರುವ ಪ್ರಶ್ನೆ ಸೂಚನೆ ಸಂಖ್ಯೆ:106ಕ್ಕೆ ಅನುಬಂಧ

| | | | | | |
|---|---|---|---|---|---|
| | | | | | (Rs in lakhs) |
| Pending bills as on 30.11.2025 | | | | | |
| **Sl. No.** | **Head of Account** | **B. E for 2025-26** | **Pending bills** | | |
| | | | **South** | **North** | **Total** |
| | **PLAN** | | | | |
| 1 | 4702-00-101-1-02-436 New Tanks- NABARD | 0.00 | 0.00 | 0.00 | 0.00 |
| 2 | 4702-00-101-1-07-436 MOT-NABARD | 5220.00 | 0.00 | 239.31 | 239.31 |
| 3 | 4702-00-101-5-01-436 Barrages -NABARD | 3600.00 | 0.00 | 0.00 | 0.00 |
| 4 | 4702-00-101-3-01-436 LIS- NABARD | 180.00 | 0.00 | 0.00 | 0.00 |
| 5 | 4711-01-103-1-00-436 flood control works NABARD | 0.00 | 6.90 | 0 | 6.90 |
| 6 | 4702-00-101-1-02-139 New Tanks - MAJOR WORKS | 4500.00 | 198.76 | 748.02 | 946.78 |
| 7 | 4702-00-101-1-07-139 MOT- MAJOR WORKS | 13000.00 | 34345.36 | 22049.94 | 56395.30 |
| 8 | 4702-00-101-5-01-139 Barrages MAJOR | 12000.00 | 35194.34 | 52893.09 | 88087.43 |
| 9 | 4702-00-101-3-01-139 LIS MAJOR WORKS | 65000.00 | 79389.06 | 33807.87 | 113196.93 |
| 10 | 4702-00-101-5-02-139 Pashchima Vahini MAJOR WORKS | 10000.00 | 30671.79 | 12716.00 | 43387.79 |
| 11 | 4711-01-103-1-00-139 Flood control | 5000.00 | 31440.56 | 4034.79 | 35475.35 |
| 12 | 4702-00-101-1-07-133 SDP | 0.00 | 0.00 | 19.46 | 19.46 |
| 13 | 4702-00-789-0-01-422 Special Component | 35000.00 | 4.51 | 0.00 | 4.51 |
| 14 | 4702-00-101-0-10-422 SCP (Unspent) | 0.09 | 0.00 | 0.00 | 0.00 |
| 15 | 4702-00-796-0-01-423 Tribal Area sub-plan | 17010.00 | 7.99 | 0.00 | 7.99 |
| 16 | 4702-00-101-0-10-423 TSP (Unspent) | 0.78 | 0.00 | 0.00 | 0.00 |
| 17 | 4702-00-101-1-16-132 Tank Development | 1.00 | 0.00 | 0.00 | 0.00 |
| 18 | 4702-00-101-1-16-422 LDA SCP | 0.00 | 0.00 | 0.00 | 0.00 |
| 19 | 4702-00-101-1-16-423 LDA TSP | 0.00 | 0.00 | 0.00 | 0.00 |
| 20 | 4702-00-101-1- 19 , 20 -139 PMKSY HKKP SMI (STATE & CENTRAL)) | 57500.00 | 0.00 | 18324.23 | 18324.23 |
| 21 | 4702-00-101-1- 17 , 18 -139 PMKSY HKKP RRR (STATE & CENTRAL)) | 56500.00 | 0.00 | 0.00 | 0.00 |
| 23 | 2245-08-101-0-01-059 SDMF | 0.00 | 2628.54 | 2443.07 | 5071.61 |
| | **Total** | **284511.87** | **213887.81** | **147275.78** | **361163.59** |